ಇರುತ್ತದೆ. ಈ ಕಾಮಗಾರಿಯ ಟೆಂಡರ್‌ನ್ನು ತೀರ್ಮಾನ ಮಾಡುವ ಮುಂಚೆ ಅವರ ಅನುಭವ ಪರಿಗಣಿಸಿಯೇ ಕಾಮಗಾರಿಯನ್ನು ವಹಿಸಿಕೊಡಲಾಗಿರುತ್ತದೆ.

ಈ) ಗುತ್ತಿಗೆ ನೀಡುವಾಗ ಕಾಮಗಾರಿಗೆ ನಿಗಧಿಪಡಿಸಿದ್ದ ಸಮಯ ಮಳೆಗಾಲವನ್ನು ಬಿಟ್ಟು 24 ತಿಂಗಳು (ದಿನಾಂಕ: 27–10–1999 ರಿಂದ 27.6.2002) ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.

ಉ) ಸಧ್ಯದಲ್ಲಿ ಯವುದೇ ಯೋಜನೆ ರೂಪಿಸಿರುವುದಿಲ್ಲ

ಊ) ಕಟ್ಟಡದ ಕಾಮಗಾರಿ ಪೂರ್ಣಗೊಂಡ ನಂತರ ಗುತ್ತಿಗೆ ಕರಾರಿನಂತೆ ನಿರ್ವಹಣಾ ಅವಧಿಯಲ್ಲಿ ಮೂಲ ಗುತ್ತಿಗೆದಾರರೇ ಕಟ್ಟಡವನ್ನು ಸುಸ್ಥಿತಿಯಲ್ಲಿಡಬೇಕಾಗಿರುತ್ತದೆ. ನಂತರದ ಅವಧಿಯಲ್ಲಿ ಕಟ್ಟಡವನ್ನು ಸುಸ್ಥಿತಿಯಲ್ಲಿಡಲು ಅಗತ್ಯ ಅಂದಾಜು ತಯಾರಿಸಲಾಗುವುದು.

ಅಂಗವಿಕಲ ನೌಕರರಿಗೆ ಸರ್ಕಾರದ ಸೌಲಭ್ಯಗಳು

4372 (5263) : ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗವಿಕಲ ಸರ್ಕಾರಿ ನೌಕರರಿಗೆ ಕ್ಷೇತ್ರ ಕೆಲಸಕ್ಕೆ (ಷೀಲ್ಡ ಡ್ಯೂಟಿ) ಹಾಕುವ ವಿಷಯದಲ್ಲಿ ಸರ್ಕಾರದ ನೀತಿ ಏನು;

ಆ) ಕಾಲಿನಿಂದ ಅಮಗವಿಕಲ ಇರುವ ನೌಕರರನ್ನು ಕಎತ್ರ ಕೆಲಸಕ್ಕೆ ನಿಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರ್ಕಾರದ ಕ್ರಮ ಏನು;

ಇ) ಇಂತಹ ಅಂಗವಿಕಲ ನೌಕರರನ್ನು ಕ್ಷೇತ್ರ ಕೆಲಸದಿಂದ ಇತರ ಕೆಲಸಕ್ಕೆ ನಿಯೋಜಿಸುವಂತೆ ಸರಕಾರ ಆದೇಶ ಈಗಾಗಲೇ ಮಾಡಿದೆಯೇ ಹಾಗಿದ್ದಲ್ಲಿ, ಅದರ ವಿವರಗಳನ್ನು ನೀಡುವುದು;

ಈ) ಇಲ್ಲದಿದ್ದಲ್ಲಿ ಇನ್ನೂ ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀಮತಿ ಮೋಟಮ್ಮ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು)

ಅ) ಅಂಗವಿಕಲರಿಗೆ ಅವರ ಸಾಮರ್ಥ್ಯಕ್ಕನುಗುಣವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶವಿರುತ್ತದೆ.

ಆ) ಹೌದು.

ಅಂಗವಿಕಲರ ಅಧಿನಿಯಮ 95ರ ಪ್ರಕಾರ ಅಂಗವಿಕಲರಿಗೆ ಸಮಾನ ಅವಕಾಶವನ್ನು ನೀಡಬೇಕಾಗಿರುತ್ತದೆ. ಆದುದರಿಮದ ಅಂಗವಿಕಲರೂ ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶವನ್ನು ಸರ್ಕಾರ ಕಲ್ಪಿಸಿರುತ್ತದೆ.

ಇ) ಇಲ್ಲ.

ಈ) ಉಪ ಪ್ರಶ್ನೆ (ಆ) ದಲ್ಲಿ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕೆರೆಗಳ ಒತ್ತುವರಿ

4394 (3939) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕೆರೆಗಳ ಒತ್ತುವರಿ ತೆರವುಗೊಳಿಸಲು ಸುಗ್ರೀವಾಜ್ಞೆ ಮೂಲಕ ಕ್ರಮ ಕೈಗೊಳ್ಳಲಾಗುವುದೇ (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 40 ಹೆಕ್ಟೇರ್‌ನಿಂದ 2000 ಹೆಕ್ಟೇರ್ ಅಚ್ಚುಕಟ್ಟು ಹೊಂದಿರುವ 3304 ಕೆರೆಗಳು ನಿರ್ವಹಣೆಯಲ್ಲಿರುತ್ತವೆ. ಈ ಪೈಕಿ ಕೆಲವು ಕೆರೆಗಳು ಒತ್ತುವರಿಯಾಗಿರುತ್ತವೆ. ಬಹುತೇಕ ಕೆರೆಗಳು ಪುರಾತನ ಕೆರೆಗಳಾಗಿದ್ದು, ಈ ಕೆರೆಗಳ ಜಮೀನನ್ನು ವಿವಿಧ ಪ್ರಮಾಣದಲ್ಲಿ ಒತ್ತುವರಿಯಾಗಿರುತ್ತವೆ. ಈ ಕೆರೆಗಳ ಭೂಮಾಪನ ಕಾರ್ಯವನ್ನು ಕೈಗೊಂಡು ನಿರ್ದಿಷ್ಟವಾಗಿ ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆ ಎಂಬುದನ್ನು ತಿಳಿದುಕೊಂಡು ಒತ್ತುವರಿಯನ್ನು ತೆರವುಗೊಳಿಸಲು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಒತ್ತುವರಿಯಾಗಿರುವ ಪ್ರದೇಶವನ್ನು ಭೂಮಾನ ಮಾಡಲು ಭೂಮಾಪಕರುಗಳ ಕೊರತೆ ಇರುತ್ತದೆ. ಆದಾಗ್ಯೂ ಹಾಲೀ ಇರುವ ಭೂಮಾಪಕರುಗಳಿಂದ ಒತ್ತುವರಿಯಾಗಿರುವ ಕೆರೆ ಅಂಗಳದ ಜಮೀನನ್ನು ಗುರುತಿಸುವಂತೆ ಸಂಬಂಧಪಟ್ಟ ಎಲ್ಲಾ ಕಾರ್ಯಪಾಲಕ ಅಭಿಯಂತರುಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಈವರೆವಿಗೂ ಸುಮಾರು 97 ಕೆರೆಗಳ ಭೂಮಾಪನ ಕಾರ್ಯವನ್ನು ನಡೆಸಿ ಒತ್ತುವರಿಯಾಗಿರುವ ವಿಸ್ತೀರ್ಣ ಗುರುತಿಸಲಾಗಿರುತ್ತದೆ. ಒತ್ತುವರಿಯಾಗಿರುವ ಕೆರೆ ಜಮೀನನ್ನು ತೆರವುಗೊಳಿಸಲು ಕಂದಾಯ ಹಾಗೂ ಭೂಮಾಪನ ಇಲಾಖೆಗಳ ಸಹಕಾರದೊಂದಿಗೆ ನಿಯಮಾನುಸಾರ ಕ್ರಮವನ್ನು ಕೈಗೊಳ್ಳಲಾಗುತ್ತಿವೆ. ಆದುದರಿಂದ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಸದ್ಯಕ್ಕೆ ಸುಗ್ರಿವಾಜ್ಞೆ ಹೊರಡಿಸುವ ಅವಶ್ಯಕತೆ ಇರುವುದಿಲ್ಲ.

ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಿರುಸೇತುವೆ ಅಣೆಕಟ್ಟಿನ ನಿರ್ವಹಣೆ ಸಮರ್ಪಕವಾಗಿ ಇಲ್ಲದೇ ಇರುವ ಬಗ್ಗೆ

4409 (5076) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ಅನಗಳ್ಳಿ ಗ್ರಾಮದ ಮೂಲಕ ಬಸ್ರೂಗೆ ಸಂಪರ್ಕಿಸುವ ಕಿರುಸೇತುವೆ ಹಾಗೂ ಅಣೆಕಟ್ಟು ನಿರ್ವಹಣೆ ಇಲ್ಲದೆ ನಿರ್ಲಕ್ಷಕ್ಕೆ ಒಳಗಾಗಿ ಲಘು ವಾಹನ ಓಡಾಡಲು ಅಪಾಯದ ಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆಯ ಮೂಲ ಉದ್ದೇಶವಾದ ಲಘು ವಾಹನಗಳ ಸಂಚಾರ ಮತ್ತು ಕಿಂಡಿ ಅಣೆಕಟ್ಟಾಗಿ ಉಪಯೋಗಿಸುವ ಯೋಜನೆ ಕಾರ್ಯಗತವಾಗದೇ ಇರಲು ಕಾರಣವೇನು;

ಇ) ಈ ಸೇತುವೆಯನ್ನು ಲಘು ವಾಹನಗಳ ಮುಕ್ತ ಸಂಚಾರಕ್ಕೆ ಯೋಗ್ಯವಾಗಿ ನಿರ್ವಹಣೆ ಮಾಡಲಾಗುವುದೇ;

ಈ) ಈ ಕಿರು ಸೇತುವೆಯ ಬದಲು ಬಸ್ರೂರು ಆನಗಳ್ಳಿ ಮೂಲಕ ಕುಂದಾಪುರಕ್ಕೆ ಸಂಪರ್ಕಿಸುವ ಹೊಸ ಸೇತುವೆಯನ್ನು ನಿರ್ಮಿಸುವ ವಿಚಾರ ಸರಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ ಈ ಸೇತುವೆಯನ್ನು ಎಷ್ಟು ವೆಚ್ಚದಲ್ಲಿ ಯಾವಾಗ ನಿರ್ಮಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಕುಂದಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕುಂದಾಪುರ ತಾಲ್ಲೂಕಿನ ಆನಗಳ್ಳಿ ಗ್ರಾಮದ ಬಸ್ರೂರಿಗೆ ಸಂಪರ್ಕಿಸುವ ಸ್ಥಳದಲ್ಲಿ ಕಾಲು ಸೇತುವೆ ಸಹಿತ ಉಪ್ಪು ನೀರು ತಡೆ ಅಣೆಕಟ್ಟನ್ನು 1983–84 ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗಿದೆ. ಇದು ಕಾಲು ಸೇತುವೆ ಸಹಿತ ಉಪ್ಪು ನೀರು ತಡೆ ಅಣೆಕಟ್ಟು ಕಾಮಗಾರಿಯಾಗಿದ್ದು ಕಾಲು ಸೇತುವೆಯು ಲಘು ವಾಹನ ಓಡಾಟಕ್ಕೆ ಬೇಕಾಗುವ ವಿನ್ಯಾಸವನ್ನು ಹೊಂದಿಲ್ಲದ ಕಾರಣ ಇದರಲ್ಲಿ ಲಘು ವಾಹನ ಸಂಚಾರಕ್ಕೆ ಅನುಮತಿ ಇರುವುದಿಲ್ಲ.